

ಸಂತೆಕಸಲಗೆರೆ ಪ್ರಕಾಶ್
ಕಲೆ: ಎಸ್‌ವಿ. ಹೂಗಾರ್

# ಕುಲಾಂತರಿ

**ನನ್ನ ಪಾಡಿಗೆ ನಾನು ಎಮ್ಮೆಯ ಕಾಯ್ಕೊಂಡು ಸುಮ್ಮನೆ ನಾನಿದ್ದೆ||**
**ಹಾಳಾದವೆರಡು ಮೊಲೆ ಬಂದೋ||**
**ನನ್ನಪ್ಪ ನನ್ನ ಕಂಡವರಿಗೆ ಕೊಡುತ್ತಾನೆ||**

**-ಜನಪದ**

ಕುಂತಿ ಬಸಿರಾದ ಸುದ್ದಿ ತಿಳಿದ ಗಾಂಧಾರಿ ತನ್ನ ಗರ್ಭವನ್ನು ಹಿಚುಕಿಕೊಂಡಳು. ವ್ಯಾಸರು ಮಣ್ಣಿನ ಕುಡಿಕೆಯಲ್ಲಿ ಚೂರಾದ ಅವಳ ಮಾಸಲನ್ನು ಹಡೆಹಾಕಿ ಕಾವು ಕೊಟ್ಟರು... ಹೀಗೆ ಪುರಾಣದಲ್ಲಿ ನೂರೊಂದು ಮಕ್ಕಳಾದ ಕಥೆ ಇದೆ. ತನ್ನೂರಿನಲ್ಲಿ ನಡೆದ ನಾಟಕದ ಅದೇ ದೃಶ್ಯವೊಂದನ್ನು ಜ್ಞಾಪಿಸಿಕೊಂಡ ಚಂಚಲೆ ವನಜಾಕ್ಷಿ, ತನ್ನದೇ ಗದ್ದೆಯ ತೆವರಿ ಮೇಲೆ ನಡೆಯುವಾಗ ಕಾಲು ಎಡವದೇ ಇರಲಿಲ್ಲ!

ಗದ್ದೆಯ ನಡುವೆ ನಿಂತು ದೃಷ್ಟಿ ಹರಿದಷ್ಟು ನೋಡಿದಳು. ತನ್ನ ಉದ್ದನೆಯ ಬಾಹು ಚಾಚಿ, ಅಲ್ಲಿನ ತುದಿಯವರೆಗೂ ಮೈಚಾಚಿ, ಬಾಚಿ ತಬ್ಬಿ ಹಿಡಿದು, ತನ್ನ ಮೈಮನವೆಲ್ಲ ತಣಿಸಿಬಿಡು, ದಣಿದ ದೇಹ ಯಾವೊತ್ತು ಇಂಥ ಸುಖವ ಕಂಡಿರಬಾರದು...

ಈ ಅಮೂಲ್ಯ ಘಳಿಗೆಯನ್ನು ಮನಸಾರೆ ಹಿಡಿದು, ಕಣ್ಣುಮುಚ್ಚಿ, ಸುಖವನ್ನು ಬೊಗಸೆಯಲ್ಲಿ ಮೊಗೆದು ಕುಡಿಯುವ ಹೊತ್ತು. ಕಾದ ಭೂಮಿ ತಣಿಯುವ ಹೊತ್ತಿಗೆ ಬಿರುಗಾಳಿ ಬೀಸಿತು. ಹಿಡಿಶಾಪ ಹಾಕುವಷ್ಟು ನಿರಾಸೆ. ಮನಸ್ಸು ಕ್ರೋಧಗೊಂಡಿತು. ತಣಿಯದ ದೇಹ ಹಪಹಪಿಸಿತು.

* * *

ಇಷ್ಟಗಲದ ಹೊಲದಲ್ಲಿ ಬೀಜ ಇಲ್ಲದ ಬೆಳೆ.

